ಏಳು ವರ್ಷಗಳಾದವು, ನಿರ್ಭಯಾಳ ಘಟನೆಯನ್ನು ಹೇಗಾದರೂ ಮರೆತುಬಿಡಬೇಕು ಎಂದು ನಮ್ಮೊಳಗಿನ ನಾಗರಿಕ ಅಂತಃಕರಣವು ಭಾವನಿರ್ಧಾರ ಮಾಡುತ್ತಿರುವಾಲೇ ಇನ್ನೊಂದು ಭಯಾನಕ ಘಟನೆ ಬೆಚ್ಚಿಬೀಳಿಸಿದೆ. ಹೈದರಾಬಾದ್ ಹತ್ತಿರ ಮೊನ್ನೆ ನಡೆದ ಪಶುವೈದ್ಯೆಯೊಬ್ಬಳ ಮೇಲಿನ ಪೂರ್ವಯೋಜಿತ ಸಾಮೂಹಿಕ ಅತ್ಯಾಚಾರ, ಹಾಗೂ ನಂತರ ಆಕೆಯ ಶವವನ್ನು ಸುಟ್ಟುಹಾಕಿದ ದುರ್ಘಟನೆಯು, ಮಾನವನ ಕ್ರೌರ್ಯದ ಮುಖವನ್ನು 'ನಾನಿನ್ನೂ ಹೋಗಿಲ್ಲ' ಎಂದು ಮತ್ತೆ ಅನಾವರಣಗೊಳಿಸುತ್ತಾ ಅಟ್ಟಹಾಸ ಮೆರೆದಿದೆ. ಯಾವುದೇ ಗಂಡಸು ಹಿಂಸ್ರಪಶುವನ್ನು ಮೀರಲು ಹೇಗೆ ಸಾಧ್ಯ ಎಂದು ಕಲ್ಪಿಸಿಕೊಳ್ಳಲೂ ಭಯವಾಗುತ್ತಿದೆ. ಇಡೀ ಪ್ರಾಣಿಪ್ರಪಂಚದಲ್ಲಿ ಹೆಣ್ಣನ್ನು ಒಲೈಸಲು ಗಂಡು ಬುದ್ಧಿವಂತಿಕೆಯ ತಂತ್ರಗಳನ್ನು ಉಪಯೋಗಿಸುತ್ತದೆ. ಆದರೆ ಕಾಮಕ್ರಿಯೆಯನ್ನು ಹಿಂಸೆಯ ಅಸ್ತ್ರವಾಗಿ ಬಳಸುವುದು ಮಾನವಪ್ರಾಣಿಗೆ ಮಾತ್ರ ಸಾಧ್ಯವಿದೆ ಎನ್ನುವುದು ದುರ್ದೈವ. ಅತ್ಯಾಚಾರಿಗಳು ಹೇಗೆ ನಿರ್ಮಾಣ ಆಗುತ್ತಾರೆ, ಅವರ ಸ್ವಭಾವ ಎಲ್ಲಿಂದ ಹಾಗೂ ಹೇಗೆ ಹುಟ್ಟುತ್ತದೆ ಎಂಬುದನ್ನು ಎದ್ದುಕುಳಿತು ಯೋಚಿಸಬೇಕಾದ ಪ್ರಸಂಗ ಬಂದಿದೆ. ಅತ್ಯಾಚಾರಕ್ಕೆ ಲಿಂಗಭೇದವಿಲ್ಲ. ಇಬ್ಬರು ಸಲಿಂಗಿಗಳ ನಡುವೆಯೂ ಅತ್ಯಾಚಾರ ನಡೆಯುವುದುಂಟು. ಮಕ್ಕಳ ಮೇಲೆ ಗಂಡು ಹೆಣ್ಣು ಇಬ್ಬರೂ ಅತ್ಯಾಚಾರ ಮಾಡಿದ್ದಿದೆ. ಆದರೆ ಈ ಲೇಖನದಲ್ಲಿ ಹೆಣ್ಣಿನ ಮೇಲೆ ಗಂಡು ನಡೆಸುವ ಅತ್ಯಾಚಾರಕ್ಕೆ ಒತ್ತುಕೊಡುತ್ತಿದ್ದೇನೆ.

## ಉಗಮವೆಲ್ಲಿ?

ಪ್ರಾಗೈತಿಹಾಸದಲ್ಲಿ, ಅಂದರೆ ಸುಮಾರು 72,000 ವರ್ಷಗಳ ಹಿಂದೆ ಮಾನವರು ಈಗಿನ ಕೋತಿಗಳಂತೆ ಮರದ ಮೇಲೆ ವಾಸಿಸುತ್ತಿದ್ದರು. ಆಗ ಇಷ್ಟವಾದವರ ಜೊತೆಗೆ ಕೂಡಬಹುದಿತ್ತು. ನಂತರ ಪ್ರಕೃತಿಯ ವಿಕೋಪದಿಂದ (ಉದಾ: ಟೋಬಾ ಜ್ವಾಲಾಮುಖಿಯ ಆಸ್ಫೋಟ, ಉಲ್ಕಾಪಾತ, ಹಿಮವರ್ಷ) ಅರಣ್ಯಗಳು ನಾಶವಾಗಿ ಜನರು ನೆಲದ ಮೇಲೆ ವಾಸಿಸಲು ಶುರುಮಾಡಿದುದಕ್ಕೆ ಆಧಾರವಿದೆ. ಆಗ ಗರ್ಭವತಿಯರು ಹಾಗೂ ಬಾಣಂತಿಯರು ನೆಲವಾಸಿ ಕ್ರೂರಪ್ರಾಣಿಗಳಿಗೆ ಬಲಿಯಾಗುತ್ತ 'ದುರ್ಬಲರು' ಎನ್ನಿಸಿಕೊಂಡರು. ಅವರನ್ನು ಕಾಪಾಡಲು ಗಂಡಸರು ತಯಾರಾದರು. ಅಲ್ಲಿಂದಲೇ ಪುರುಷ ಪ್ರಧಾನತೆ ಎನ್ನುವುದು ಹುಟ್ಟಿಕೊಂಡಿತು ಎಂದು ಕಾಣುತ್ತದೆ. ಇದೇ ಕ್ರಮೇಣ ಸುಮಾರು 5000 ವರ್ಷಗಳ ಹಿಂದೆ ಹೆಣ್ಣಿನಿಂದ ಬದ್ಧತೆಯನ್ನು ಬೇಡುತ್ತ ಮದುವೆಯ ರೂಪ ಪಡೆಯಿತು. ಗಂಡಿಗೆ ಹೆಣ್ಣಿನ ಒಡೆತನ ಪ್ರಾಪ್ತವಾಗಿ ಹಕ್ಕುಸಾಧನೆ ಕಾಲಿಟ್ಟಿತು. ಅಲ್ಲಿಂದ ಕಾಮಕ್ರಿಯೆಗೆ ಗಂಡಿನ ಆಗ್ರಹ, ಹೆಣ್ಣಿನ ಇಷ್ಟವಿಲ್ಲದ ಒಪ್ಪಿಗೆ, ಒಪ್ಪದ ಹೆಣ್ಣನ್ನು ಧಿಕ್ಕರಿಸಿ ನಡೆಸುವ ಬಲವಂತದ ಸಂಭೋಗ... ಹೀಗೆ ಅತ್ಯಾಚಾರದ ಸಾಮಾಜಿಕ ಉಗಮವಾಯಿತು ಎಂದು ನನ್ನ ಅನಿಸಿಕೆ. ಅಷ್ಟಲ್ಲದೆ ಪ್ರಸ್ತುತ ಅತ್ಯಾಚಾರಿಗಳ ವರ್ತನೆಗೆ ಸಂಕೀರ್ಣ ಪದರಗಳಿವೆ. ಇದರಲ್ಲಿ ಪಾರಮ್ಯವಲ್ಲದೆ ಹಿಂಸೆಯಿದೆ, ಕ್ರೌರ್ಯವಿದೆ, ಸ್ತ್ರೀದ್ವೇಷವಿದೆ, ಸೇಡು ತೀರಿಕೆಯಿದೆ. ಇದೆಲ್ಲ ಎಲ್ಲಿಂದ ಬಂತು?

## ಸಹಾನುಭೂತಿಯ ಸುತ್ತ

ಅತ್ಯಾಚಾರಿಯ ಮನೋಭಾವವನ್ನು ಅರ್ಥಮಾಡಿಕೊಳ್ಳುವ ಮುಂಚೆ ಸಹಜ ಲೈಂಗಿಕ ಮನೋಭಾವದ ಬಗೆಗೆ ತಿಳಿಯೋಣ. ಪ್ರತಿಯೊಬ್ಬರಲ್ಲಿ ಕಾಮುಕತೆ ಎನ್ನುವುದು ಸಹಜವಾಗಿದೆ. ಸೂಕ್ತ ಸಂಗಾತಿ ಸಿಕ್ಕಾಗ ಅದನ್ನು ಹೊರತಂದು ತೋರಿಸಿಕೊಳ್ಳುತ್ತೇವೆ. ಸಂಗಾತಿಯನ್ನು ಕೂಟಕ್ಕೆ ಆಹ್ವಾನಿಸುತ್ತೇವೆ. ನನ್ನಲ್ಲಿ ಬಯಕೆಯಿದೆ, ನಿನ್ನಲ್ಲೂ ಇದೆಯೆ ಎಂದು ವಿಚಾರಿಸುತ್ತೇವೆ. ಒಂದುವೇಳೆ ಇಲ್ಲದಿದ್ದರೆ ಬೇಸರವಾದರೂ ಹೀಗೇಕೆ ಎಂದು ಕೆದಕಿ ಕೇಳುತ್ತೇವೆ. ಸಂಗಾತಿಯ ಕಾಮವನ್ನು ಕೆರಳಿಸಲು ಸರ್ಕಸ್ಸು ಮಾಡುತ್ತೇವೆ. ಆದರೂ ಒಪ್ಪದಿದ್ದರೆ ಮುನಿಸಿಕೊಳ್ಳುವುದೋ, ಕೋಪಿಸಿಕೊಳ್ಳುವುದೋ, ಕೆಲವೊಮ್ಮೆ ಒತ್ತಾಯದಿಂದ ಮುಗಿಬೀಳುವುದೋ ಮಾಡುತ್ತೇವೆ. ಅಂತೂ ಇಂತೂ ಸಂಭೋಗ ನಡೆಯುತ್ತದೆ. ನಂತರ ಸಂಗಾತಿಯ ಕಡೆಗೆ ಮನಸ್ಸು ಹೊರಳುತ್ತದೆ. ಆಕೆಯ ಸ್ಥಿತಿ ನಮ್ಮ ಮನಸ್ಸಿಗೆ ತಟ್ಟುತ್ತದೆ. ಹೀಗೆ ವರ್ತಿಸಬಾರದಿತ್ತು ಎಂದು ವಿಷಾದವಾಗುತ್ತದೆ. ಸಂಗಾತಿಗೆ ಏನು ಅನ್ನಿಸಬಹುದು ಎಂಬುದನ್ನು ನಾವೂ ಅನುಭವಿಸುತ್ತೇವೆ. ಇದೇ ಸಹಾನುಭೂತಿ (ಸಹ+ಅನುಭೂತಿ, **empathy**). ಇನ್ನೊಬ್ಬರನ್ನು ಭಾವನಾತ್ಮಕ ಮಟ್ಟದಲ್ಲಿ ಅರ್ಥಮಾಡಿಕೊಳ್ಳುವ, ಹಾಗೂ ಅವರ ಭಾವನೆಗಳನ್ನು ತಾನೂ ಅನುಭವಿಸುವ ಗುಣವಾದ ಸಹಾನುಭೂತಿಯು ಮಾನವೀಯತೆಯ ಹೆಗ್ಗುರುತು. ತಪ್ಪಿಗೆ ಪಶ್ಚಾತ್ತಾಪ ಆಗುವುದಕ್ಕೆ ಸಹಾನುಭೂತಿ ಇರಲೇಬೇಕು. ಒಟ್ಟಿನಲ್ಲಿ ಸಹಜ ಕಾಮುಕತೆಯ ಪಾರಸ್ಪರಿಕ ಲಕ್ಷಣ ಎಂದರೆ ಸಂಗಾತಿಯನ್ನು ಅರ್ಥಮಾಡಿಕೊಂಡು ಸ್ಪಂದಿಸುವುದು – ಪ್ರೀತಿ, ಅನ್ಯೋನ್ಯತೆ ಇಲ್ಲದಿದ್ದರೂ ನಡೆದೀತು.

**ಈಗ** ಅತ್ಯಾಚಾರಿ ಗಂಡಸರ ವಿಷಯಕ್ಕೆ ಬರೋಣ. ಅವರಲ್ಲಿ ಸಹಾನುಭೂತಿ ಎನ್ನುವುದೇ ಇರುವುದಿಲ್ಲ. ಹಾಗಾಗಿ ಹುಟ್ಟುಗುಣವಾದ ಹಸಿಕಾಮ ಹಾಗೂ ಅದರ ಸುತ್ತ ಬೆಳೆದಿರುವ ಅನಿಸಿಕೆಗಳೇ ಅವರ ಮಾರ್ಗದರ್ಶಿಯಾಗುತ್ತವೆ. ಹೆಣ್ಣು ಬೇಡವೆನ್ನುವುದನ್ನು ಅವರು ನಂಬುವುದೇ ಇಲ್ಲ. ಅದನ್ನು 'ಬೇಕು' ಎಂದು ಅರ್ಥಮಾಡಿಕೊಳ್ಳುತ್ತಾರೆ. ತಾನು ಆಕೆಗೆ ಮಾಡುವುದೆಲ್ಲ ರೋಚಕವಾಗಿರುತ್ತದೆ ಎಂದು ಭಾವಿಸುತ್ತಾರೆ. ಏನು ಸುಖ ಕಳೆದುಕೊಳ್ಳುತ್ತಿದ್ದಾಳೆ ಎಂದು ಆಕೆಗೇ ಗೊತ್ತಿಲ್ಲ ಎಂದು ಭ್ರಮಿಸುತ್ತಾರೆ. ಆಕೆ ಒಡ್ಡುವ ಪ್ರತಿರೋಧವನ್ನು ತಟಸ್ಥಗೊಳಿಸುತ್ತ ಕಾಮಕ್ರಿಯೆಯ ಕಡೆ 'ಕರೆದೊಯ್ಯು'ತ್ತಾರೆ. ಅದು ಮುಗಿದಮೇಲೆ ದಿಗ್ವಿಜಯ ಸಾಧಿಸಿದಂತೆ ರಾಕ್ಷಸ ತೃಪ್ತಿ ಹೊಂದುತ್ತಾರೆ. ಬಲಿಯಾದವರ ಮನಸ್ಸು–ಭಾವನೆಗಳು ಛಿನ್ನವಿಚ್ಛಿನ್ನ ಆಗುತ್ತವೆ ಎನ್ನುವ ಕಲ್ಪನೆಯೇ ಅವರಿಗೆ ಬರುವುದಿಲ್ಲ.

## ಸಣ್ಣದರಿಂದ ದೊಡ್ಡದಕ್ಕೆ

ಹಾದಿಯಲ್ಲಿ ಹೋಗುವಾಗ ಹುಡುಗನೊಬ್ಬ ಸರ್ರನೆ ಬಂದು ಸ್ತನಗಳನ್ನು ಮುಟ್ಟಿ ಮಾಯವಾದುದರ ಅನುಭವ ಹಲವಾರು ಹೆಂಗಸರಿಗೆ ಆಗಿರಬಹುದು. ಇಂಥವರು ಚಿಕ್ಕ ಲೈಂಗಿಕ ಅಪರಾಧವನ್ನು ಮಾಡಿದಾಗ ಸಿಕ್ಕಿಬೀಳದಿದ್ದರೆ ಸ್ಫೂರ್ತಿಗೊಂಡು ದೊಡ್ಡದಕ್ಕೆ ಹೊಂಚುಹಾಕುತ್ತಾರೆ. ಇದಕ್ಕೆ ಕಾರಣವೇನೆಂದರೆ, ಯಾವುದೇ ಅಪರಾಧವನ್ನು ಮಾಡುವಾಗ

